## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **746 (740)** |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | **10-03-2026** |

*****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಲಾಗುತ್ತಿರುವ ಪಿಎಂ ಮಿತ್ರ (PM-MITRA) ಮೆಗಾ ಜವಳಿ ಪಾರ್ಕ್ ಯೋಜನೆಯ ಪ್ರಸ್ತುತ ಸ್ಥಿತಿಗತಿ ಏನು ಮತ್ತು ಈ ಯೋಜನೆಯಿಂದ ಜಿಲ್ಲೆಯ ಎಷ್ಟು ಜನರಿಗೆ ಉದ್ಯೋಗ ದೊರೆಯಲಿದೆ; | PM-Mega Integrated Textile Region and Apparel Parks (PM-MITRA) ಮೆಗಾ ಜವಳಿ ಪಾರ್ಕ್ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಫರತಬಾದ್ ಹೋಬಳಿ **ಹೊನ್ನಕಿರಣಗಿ ಮತ್ತು ನದಿಸಿನ್ನೂರು ಗ್ರಾಮದ** ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 1000 ಎಕರೆ ಭೂ-ಪ್ರದೇಶವನ್ನು ಪಿಎಂ-ಮಿತ್ರ ಮೆಗಾ ಜವಳಿ ಪಾರ್ಕ್ ಸ್ಥಾಪಿಸಲು ಈ ಸಂಬಂಧ ಸ್ಥಾಪಿಸಲಾದ PM-MITRA Park Karnataka Ltd (ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಸ್.ಪಿ.ವಿ) ಹೆಸರಿನಲ್ಲಿ ನೋಂದಾಯಿಸಲಾಗಿರುತ್ತದೆ.<br>ರಾಜ್ಯ ಸರ್ಕಾರದಿಂದ ಸದರಿ ಪಾರ್ಕ್‌ನ ಗೇಟ್‌ನವರೆಗೆ ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಪವರ್ ಸ್ಟೇಷನ್, ನೀರು (ಬ್ಯಾರೇಜ್ ನಿರ್ಮಾಣ ಮತ್ತು ಪೈಪ್‌ಲೈನ್) ಕಾಮಗಾರಿಗಳಿಗಾಗಿ ರೂ.390.26 ಕೋಟಿಗಳನ್ನು ದಿನಾಂಕ:17-09-2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿ, ಮಂಜೂರಾತಿಯನ್ನು ಸರ್ಕಾರದ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ:03.10.2024 ರಲ್ಲಿ ನೀಡಿದೆ.<br>ಈ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ರಸ್ತೆ ಮತ್ತು ಸಿಸಿ ಚರಂಡಿ ನಿರ್ಮಾಣ ಪ್ರಾರಂಭಿಸಲಾಗಿದೆ. ಉಳಿದ ಮೂಲಭೂತ ಸೌಲಭ್ಯಗಳ ಪ್ರಗತಿಯಲ್ಲಿರುತ್ತವೆ. ದಿನಾಂಕ:27.10.2025 ರಂದು ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು (Environmental Clearance) ಪಡೆದುಕೊಂಡಿದ್ದು, ಯೋಜನೆಯನ್ನು ಕೇಂದ್ರ ಸರ್ಕಾರದ PPPAC (Public-Private Partnership Appraisal Committee) ಯ ಅನುಮೋದನೆಗೆ ಮಂಡಿಸಲಾಗಿದೆ. |

..2

<table>
<tr><td></td><td></td><td>ಪ್ರಸ್ತುತ, ದಿನಾಂಕ:03.02.2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ತೀರ್ಮಾನದಂತೆ PM-MITRA Park ಅನ್ನು ರಾಜ್ಯದ KIADB ಮೂಲಕ ಮೂಲಸೌಲಭ್ಯ ಅಭಿವೃದ್ಧಿಯ ಸಾಧ್ಯತಾ ಕುರಿತು ಪರಿಶೀಲನೆಯಲ್ಲಿದೆ. PM-MITRA ಮೆಗಾ ಜವಳಿ ಪಾರ್ಕ್ ಯೋಜನೆಯ ಪ್ರಸ್ತುತ ಸ್ಥಿತಿಗತಿಯನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಕಲಬುರಗಿ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಸ್ಥಳೀಯ ಇಂಜಿನಿಯರಿಂಗ್ ಪದವೀಧರರಿಗೆ ಸ್ವಯಂ ಉದ್ಯೋಗವಕಾಶ ಕಲ್ಪಿಸಲು ಸರ್ಕಾರವು ಹಮ್ಮಿಕೊಂಡಿರುವ ವಿಶೇಷ ಪ್ರೋತ್ಸಾಹಕ ಕ್ರಮಗಳೇನು;</td><td>ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ಕೈಗಾರಿಕಾ ನೀತಿ 2025-30 ನ್ನು ಜಾರಿಗೆ ತಂದಿದ್ದು, ಕಲಬುರಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ವಲಯ-1 ರಲ್ಲಿ ಅಳವಡಿಸಿ ಹೆಚ್ಚಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿರುತ್ತದೆ. ವಿಶೇಷವಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ವರ್ಗೀಕರಿಸಿ ಡಾ ಡಿ.ಎಂ.ನಂಜುಂಡಪ್ಪ ವರದಿಯನ್ವಯ ಹೆಚ್ಚುವರಿ ಪ್ರೋತ್ಸಾಹವನ್ನು ಕಲ್ಪಿಸಲಾಗಿರುತ್ತದೆ. ಮತ್ತು ಕೈಗಾರಿಕೆ ಸ್ಥಾಪಿಸಲು ವಿವಿಧ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಇ)</td><td>ಕಲಬುರಗಿಯ ಪ್ರಮುಖ ಉದ್ಯಮವಾದ ಬೇಳೆ ಕಾರ್ಖಾನೆಗಳನ್ನು (Dal Mills) ಆಧುನಿಕರಿಸಲು ಮತ್ತು ಅವುಗಳನ್ನು ಜಾಗತಿಕ ಮಟ್ಟದ ಸ್ಪರ್ಧಾತ್ಮಕತೆಗೆ ಸಜ್ಜುಗೊಳಿಸಲು ಸರ್ಕಾರವು ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡುತ್ತಿದೆಯೇ; ನೀಡುತ್ತಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ನೀಡಲಾದ ಅನುದಾನದ ವಿವರವೇನು;</td><td>ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕಾ ನೀತಿ 2025-30 ಯನ್ವಯ ಹೊಸ ವಿಸ್ತರಣೆ, ಆಧುನೀಕರಣ ಮತ್ತು ವೈವಿಧ್ಯೀಕರಣಗಳಿಗೆ ಹೂಡಿಕೆಯಾದ ಬಂಡವಾಳದ ಮೇಲೆ ಕೈಗಾರಿಕಾ ನೀತಿಯನ್ವಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕಲ್ಪಿಸಲಾಗಿರುತ್ತದೆ.<br>ಕಳೆದ 2 ವರ್ಷಗಳಲ್ಲಿ (2023-24 ಮತ್ತು 2024-25) ಕರ್ನಾಟಕ ಸರ್ಕಾರದ ಕೈಗಾರಿಕಾ ನೀತಿಯಡಿ ಕಲಬುರಗಿ ಜಿಲ್ಲೆಯ ದಾಲ್ ಮಿಲ್ ಗಳಿಗೆ ರೂ.1,79,02,944/- ಗಳ ಸಹಾಯಧನ ಬಿಡುಗಡೆ ಮಾಡಿದ್ದು, ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.</td></tr>
<tr><td>ಈ)</td><td>ಜಿಲ್ಲೆಯಲ್ಲಿ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿಗಾಗಿ (Industrial Infrastructure) ಗುರುತಿಸಲಾದ ಪ್ರದೇಶಗಳೂ ಯಾವುವು ಮತ್ತು ಇಲ್ಲಿನ ಸಣ್ಣ ಉದ್ದಿಮೆದಾರರಿಗೆ ಸಂಶೋಧನೆ ಹಾಗೂ ನಾವೀನ್ಯತೆಗಾಗಿ (R&D) ಸಜ್ಜುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಕಲಬುರಗಿ ತಾಲೂಕಿನ ಉದ್ದೇಶಿತ ನಂದೂರ ಕೆಸರಟಗಿ ಕೈಗಾರಿಕಾ ಪ್ರದೇಶ 3ನೇ ಹಂತದ 591.22 ಎಕರೆ ಜಮೀನಿನ ಪೈಕಿ ಈ ಕೆಳಗಿನಂತೆ ವಿವಿಧ ಉದ್ದೇಶಿತ ಕೈಗಾರಿಕೆಗಳಿಗೆ ಜಮೀನನ್ನು ಕಾಯ್ದಿರಿಸಲಾಗಿದೆ.
<table>
<tr><th>Category / Industry</th><th>Area (in Acres)</th></tr>
<tr><td>Electronic Manufacturing Industries</td><td>36.90</td></tr>
<tr><td>Chemical & Gas Industries</td><td>47.26</td></tr>
<tr><td>Plug & Play Industrial Buildings (2 Units)</td><td>6.50</td></tr>
<tr><td>Food Park</td><td>5.51</td></tr>
<tr><td>Sustainable Electronic Park</td><td>5.24</td></tr>
</table>
ಹಾಗೂ ಕಪನೂರ 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಆಟೋ ಪಾರ್ಕ್ ಸ್ಥಾಪನೆಗೆ 20 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ ಎಂದು ಜಂಟಿ ನಿರ್ದೇಶಕರು, ಜಿಕೈಕೇ, ಕಲಬುರ್ಗಿ ರವರಿಂದ ವರದಿ ನೀಡಲಾಗಿರುತ್ತದೆ.</td></tr>
</table>

ಸಂಖ್ಯೆ: **CI 55 JAKE 2026**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

## PM-MITRA ಜವಳಿ ಪಾರ್ಕ್

- ಭಾರತ ಸರ್ಕಾರದ ಜವಳಿ ಮಂತ್ರಾಲಯವು ದೇಶಾದ್ಯಂತ 1. ತಮಿಳುನಾಡು 2. ಕರ್ನಾಟಕ 3. ಗುಜರಾತ್ 4. ಮಧ್ಯಪ್ರದೇಶ 5. ಉತ್ತರಪ್ರದೇಶ 6. ತೆಲಂಗಾಣ 7. ಮಹಾರಾಷ್ಟ್ರ ಹೀಗೆ ಒಟ್ಟು ಏಳು (07) ರಾಜ್ಯಗಳಲ್ಲಿ PM-MITRA Park ಸ್ಥಾಪನೆಗೆ ನಿರ್ಧರಿಸಿದ್ದು, ಅದರನ್ವಯ Project Approval Committee ಯು ದಿನಾಂಕ: 25-08-2023 ರಂದು ಕರ್ನಾಟಕದ ಕಲಬುರಗಿಯಲ್ಲಿ Greenfield PM-MITRA Park ಸ್ಥಾಪನೆಗೆ ಆಯ್ಕೆಯಾಗಿರುವುದನ್ನುಅಧಿಕೃತವಾಗಿ ತಿಳಿಸಿರುತ್ತಾರೆ.

- ದಿನಾಂಕ:27-03-2024 ರಂದು ಕಂಪನಿ ಕಾಯ್ದೆಯನ್ವಯ Pradhan Mantri Mega Integrated Textile Regions and Apparels (PM-MITRA) Park Karnataka Ltd, ಎಂಬ ಹೆಸರಿನ Special Purpose Vehicle (ಎಸ್.ಪಿ.ವಿ) ಕಂಪನಿಯು ನೋಂದಣಿಯಾಗಿರುತ್ತದೆ. ಸದರಿ ಎಸ್.ಪಿ.ವಿ ಯ ರಚನೆ ಈ ಕೆಳಗಿನಂತಿರುತ್ತದೆ:-

| ಕ್ರ. ಸಂ. | ಹುದ್ದೆ | ಎಸ್‌ಪಿವಿಪದನಾಮ |
|---|---|---|
| 1 | ಕಾರ್ಯದರ್ಶಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ | ಅಧ್ಯಕ್ಷರು |
| 2 | ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ | ಮುಖ್ಯಕಾರ್ಯನಿರ್ವಹಣಾಧಿಕಾರಿ(CEO) |
| 3 | ಅಪರ ಕಾರ್ಯದರ್ಶಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ | ನಿರ್ದೇಶಕರು |
| 4 | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಸರ್ಕಾರ | ನಿರ್ದೇಶಕರು |
| 5 | ಭಾರತ ಸರ್ಕಾರದ ನಾಮ ನಿರ್ದೇಶಿತರು | ನಿರ್ದೇಶಕರು |
| 6 | ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು | ನಿರ್ದೇಶಕರು |

- ಸದರಿ ಕಂಪನಿಯಲ್ಲಿ ರಾಜ್ಯ ಸರ್ಕಾರದ ಷೇರು ಶೇ.51 ರಷ್ಟು ಹಾಗೂ ಕೇಂದ್ರ ಸರ್ಕಾರದ ಷೇರು ಶೇ.49 ರ ಅನುಪಾತದಲ್ಲಿ ಹೂಡಬೇಕಾಗಿರುತ್ತದೆ. ರಾಜ್ಯ ಸರ್ಕಾರದ ಷೇರು ಬಂಡವಾಳ ರೂ.5.10 ಕೋಟಿ ದಿನಾಂಕ:24.03.2024 ಹಾಗೂ ದಿನಾಂಕ:24.09.2024 ರಂದು ಬಿಡುಗಡೆಯಾಗಿದ್ದು, ಕೇಂದ್ರ ಸರ್ಕಾರದ ಷೇರು ಬಂಡವಾಳ ರೂ.4.90 ಕೋಟಿ ಮಾರ್ಚ್-2025 ರಲ್ಲಿ ಬಿಡುಗಡೆಯಾಗಿರುತ್ತದೆ.

- ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ನದಿಸಿನ್ನೂರು, ಫಿರೋಜಾಬಾದ್ ಹಾಗೂ ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ Power Company of Karnataka Limited (PCKL) ವಶದಲ್ಲಿರುವ 1000 ಎಕರೆ ಜಮೀನನ್ನು PM-MITRA ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪಿಸಲು, ಇಂಧನ ಇಲಾಖೆಯ ಆದೇಶ ಸಂಖ್ಯೆ: ಎನರ್ಜಿ 210 ಇಇಬಿ 2022, ದಿನಾಂಕ:27.05.2024 ರಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲು ಆದೇಶಿಸಲಾಗಿರುತ್ತದೆ.

...2

- ರಾಜ್ಯ ಸರ್ಕಾರವು SPVಗೆ ಸಾಂಕೇತಿಕ ದರದಲ್ಲಿ 1000 ಎಕರೆ ಜಮೀನನ್ನು (99 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ರೂ.1 ರಂತೆ) ದಿನಾಂಕ:22.10.2024 ರಂದು ಹಸ್ತಾಂತರಿಸಲಾಗಿದೆ.

- ರಾಜ್ಯ ಸರ್ಕಾರವು PM-MITRA Parkನಲ್ಲಿನೀರು ಮತ್ತು ವಿದ್ಯುತ್ ಸರಬರಾಜಿಗೆ Kalaburagi ಯಲ್ಲಿ ಸ್ಥಾಪಿತವಾಗುವ ಘಟಕಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.5/- ಕ್ಕಿಂತ ಕಡಿಮೆ ದರದಲ್ಲಿ ವಿದ್ಯುತ್ ಹಾಗೂ ಪ್ರತಿ 1000 ಲೀಟರ್‌ಗಳಿಗೆ ರೂ.24/-ರಂತೆ (Rs.24 per KLD) ನೀರು ಸರಬರಾಜು ಮಾಡಲು ಒಪ್ಪಿಗೆ ನೀಡಲಾಗಿರುತ್ತದೆ.

- 2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-329ರಲ್ಲಿ **"ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್‌ನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ"** ಎಂಬ ಘೋಷಣೆಗೆ ಸಂಬಂಧಿಸಿದಂತೆ, ಸದರಿ ಯೋಜನೆಗೆ ಪೂರಕವಾದ ಮೂಲಸೌಕರ್ಯಕ್ಕಾಗಿ ರಾಜ್ಯದ ಸಚಿವ ಸಂಪುಟವು ರೂ.390.26 ಕೋಟಿಗಳ ಅನುದಾನ ಒದಗಿಸಲು ನಿರ್ಣಯಿಸಿ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ:03.10.2024 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.

**State Government**

**(in Crores)**

| Name of the Agency and work | Amount |
|---|---|
| PWD Kalaburagi-1.43 km Road and CC Drain | 13.48 |
| KUWSDB (water Supply)-Drinking water and Treated water Pipeline | 116.00 |
| Minor Irrigation (MI)-Barrage | 35.00 |
| KPTCL Power Station | 229.29 |
| **Total** | **393.77** |

ಮುಂದುವರೆದು, ಕೆ.ಕೆ.ಆರ್.ಡಿ.ಬಿ ಇಂದ 2024-25 ನೇ ಸಾಲಿಗೆ ಬಜೆಟ್ ಪ್ಯಾರದ ಸಾಮಾನ್ಯ ಕಾರ್ಯಕ್ರಮದಡಿ ರೂ.30.90 ಕೋಟಿ ಮತ್ತು ಮ್ಯಾಕ್ರೋ ಉಪಯೋಜನೆಯಡಿಯಲ್ಲಿ ರೂ.20.00 ಕೋಟಿಗಳ ಅನುದಾನವನ್ನು ಹೀಗೆ ಒಟ್ಟು ರೂ.50.90 ಕೋಟಿಗಳ ವಿವಿಧ ಮೂಲಭೂತ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ರೂ.45.81 ಕೋಟಿಗಳು ಹಾಗೂ ರೂ.50.00 ಕೋಟಿಗಳು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ಕಾಮಗಾರಿಗಳನ್ನು ಕೈಗೊಳ್ಳಲು ಅನುಷ್ಠಾನ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

PM-MITRA Park **ನ** Transaction Advisor **ಆಗಿ** M/s. Wazir Advisors **ರವರು ಆಯ್ಕೆಯಾಗಿರುತ್ತಾರೆ**.

- Master Developer ಅನ್ನು ಆಯ್ಕೆ ಮಾಡಲು ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ದಾಖಲಾತಿಗಳನ್ನು ರಾಜ್ಯ ಸರ್ಕಾರದ ಕಾನೂನು ಇಲಾಖೆಯಿಂದ ಅನುಮೋದನೆಯನ್ನು ನೀಡಲಾಗಿರುತ್ತದೆ.

- ದಿನಾಂಕ:27.10.2025 ರಂದು ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು (Environmental Clearance) ಪಡೆಯಲಾಗಿರುತ್ತದೆ.

- ಮುಂದುವರೆದು, ಸಿದ್ಧಪಡಿಸಿರುವ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜವಳಿ ಮಂತ್ರಾಲಯ, ಭಾರತ ಸರ್ಕಾರರವರು National Industrial Corridor Development Corporation (NICDC) ನಿಗಮದಿಂದ ಕೇಂದ್ರ ಸರ್ಕಾರದ PPPAC (Public-Private Partnership Appraisal Committee) ಸಮಿತಿ ಸಭೆಯ ಅನುಮೋದನೆ ಪ್ರಗತಿಯಲ್ಲಿದೆ.

- ದಿನಾಂಕ:03.02.2026 ರಂದು ಮಾನ್ಯ ಮುಖ್ಯಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ರವರ ಅದ್ಯಕ್ಷತೆಯಲ್ಲಿ ಜರುಗಿದ PM MITRA Textile Park ನ ಸದರಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಕೈಗೊಂಡ ತೀರ್ಮಾನ ಈ ಕೆಳಕಂಡಂತಿದೆ.

  "**ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ PM-MITRA Park ನ್ನು ಸ್ಪರ್ಧಾತ್ಮಕ ದರದಲ್ಲಿ ಹಾಗೂ ತ್ವರಿತವಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರಿಂದ ಹಾಲಿ ಜವಳಿ ಪಾರ್ಕ್‌ನಲ್ಲಿ ಒದಗಿಸಲು ಪ್ರಸ್ತಾಪಿಸಿರುವ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಲು ತಗಲುವ ಅಂದಾಜು ವಿವರಗಳ ಪ್ರಸ್ತಾವನೆಯನ್ನು ಪಡೆದು ವಿವರಗಳನ್ನು ಪರಿಶೀಲಿಸಿ, PM-MITRA Park ನ್ನು ಖಾಸಗಿ ಪಾಲುದಾರರ ಅಭಿವೃದ್ಧಿಪಡಿಸುವ ಹಾಲಿ ಪ್ರಸ್ತಾವನೆಯೊಂದಿಗೆ ಹೋಲಿಕೆ ಮಾಡಿ ನಂತರ ಸಚಿವರ ಸಂಪುಟದ ತೀರ್ಮಾನಕ್ಕೆ ಪ್ರಸ್ತಾಪಿಸಲು ಸೂಚಿಸಲಾಯಿತು**."

- ದಿನಾಂಕ:03.02.2026 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ತೀರ್ಮಾನದಂತೆ PM-MITRA ಜವಳಿ ಪಾರ್ಕ್‌ನ್ನು ರಾಜ್ಯದ KIADB ಮುಖಾಂತರ ಯೋಜನಾ ವೆಚ್ಚ ರೂ.1667.99 ಕೋಟಿಗಳ ಅನುದಾನದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಯ ಸಾಧ್ಯತೆಯ ಬಗ್ಗೆ ಪರಿಶೀಲನೆಯಲ್ಲಿದೆ.

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ ಇಲಾಖೆ

# ಅನುಬಂಧ - 1

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 746 (740)**

## 1. ಕೈಗಾರಿಕಾ ನೀತಿ 2025-30

1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.
2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ.
3. ಭೂ ಪರಿವರ್ತನಾ ಶುಲ್ಕ ಮರುಪಾವತಿ.
4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.
5. ವಿದ್ಯುತ್ ಚಕ್ತಿ ಸಹಾಯಧನ.
6. ತಂತ್ರಜ್ಞಾನ ಅಳವಡಿಕೆ & ನವೋನ್ಮೇಶಣೆ ಉತ್ತೇಜನ
7. ರಫ್ತು ಘಟಕಗಳಿಗೆ ಪ್ರೋತ್ಸಾಹ.
8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀರಣ ಉತ್ತೇಜನ
9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ

## 2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದವರಿಗೆ ಯೋಜನೆಗಳು

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಯೋಜನೆಯ ವಿವಿಧ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ನೀಡುತ್ತಿರುವ ಸಾಲ ಸೌಲಭ್ಯದ ವಿವರ ಕೆಳಕಂಡಂತಿದೆ.

### ಅ. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಹೊಸ ಘಟಕ ಸ್ಥಾಪಿಸುವ ಮೊದಲ ಪೀಳಿಗೆ ಉದ್ದಿಮೆದಾರಿಗೆ ಯೋಜನಾ ವೆಚ್ಚದಲ್ಲಿ Debt Equity ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿAದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು. ವಿಸ್ತರಣೆ/ಆಧುನೀಕರಣ/ಚಟುವಟಿಕೆ ಬದಲಾವಣೆ ಹೊಂದಿದ ಉದ್ಯಮಗಳು ಅರ್ಹವಿರುತ್ತದೆ.

ಯಂತ್ರೋಪಕರಣಗಳ ಮೇಲೆ ರೂ.10.00 ಕೋಟಿ ಹೂಡಿಕೆ ಮಾಡಿರುವ ಘಟಕಗಳು ಗರಿಷ್ಟ ರೂ.75.00 ಲಕ್ಷಗಳ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ. ಮಂಜೂರಾತಿ ಸಮಿತಿ ಸಭೆಯಲ್ಲಿ ವಿವರವಾದ ಪರಿಶೀಲನೆಯ ನಂತರ ಪರಿಶೀಲನಾ ಸಮಿತಿ ಶಿಫಾರಸು ಮಾಡಿದ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯವನ್ನು ಮಂಜೂರು ಮಾಡಲಾಗುವುದು.

ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಬಿಡುಗಡೆಮಾಡಿದ ದಿನಾಂಕದಿಂದ 04 ವರ್ಷ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮಕಂತುಗಳಲ್ಲಿ ಈ ಸಾಲವನ್ನು ಮರುಪಾವತಿ ಮಾಡತಕ್ಕದ್ದು.

### ಆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಗರಿಷ್ಟ 2 ಎಕರೆ ಕೈಗಾರಿಕಾ ನಿವೇಶನ/ಪ್ಲಾಟ್ ಗಳಿಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ.

ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಪಾವತಿಸಿ ಫಲಾನುಭವಿಯು ಸ್ವಾಧೀನ ಪತ್ರ ಪಡೆಯತಕ್ಕದ್ದು, ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮಕಂತುಗಳಲ್ಲಿ ನಿಗಮ ಹಾಗೂ ಮಂಡಳಿಗೆ ಫಲಾನುಭವಿಯು ಪಾವತಿಸತಕ್ಕದ್ದು.

**ಇ. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಗೆ ಸಾಲ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

• ಪ್ರವರ್ತಕರ ಬಂಡವಾಳ ಯೋಜನಾ ವೆಚ್ಚದ ಶೇ.10
• ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಸಾಲ

ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ.

**ಈ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿ**

ದಿನಾಂಕ:01/04/2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳು ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರ ಶುಲ್ಕಗಳನ್ನು ಸರ್ಕಾರದ ವತಿಯಿಂದ ಮರುಪಾವತಿಸಲಾಗುತ್ತಿದೆ.

**ಉ. ವಿದ್ಯುಚ್ಛಕ್ತಿ ಸಹಾಯಧನ:**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01/04/2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ ರೂ.2ರಂತೆ ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುತ್ತಿದೆ.

**3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ 6% ಬಡ್ಡಿ ಸಹಾಯಧನ ಯೋಜನೆ – (ಸಾಮಾನ್ಯ )**

**ಯೋಜನೆಯ ಅನ್ವಯ :**

- ಈ ಯೋಜನೆಯು ಕೆ.ಎಸ್.ಎಫ್.ಸಿ ಯಿಂದ ವಿಸ್ತರಣೆ / ಆಧುನೀಕರಣ / ವೈರುದ್ಧೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಣ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಸೂಕ್ಷ್ಮರಿಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.
- ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಬಡ್ಡಿ ಸಹಾಯಧನ ಪಡೆದ ಘಟಕಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹವಿರುವುದಿಲ್ಲ.
- ಈ ಯೋಜನೆಯು ದುಡಿಮೆ ಬಂಡವಾಳ ಸಾಲಕ್ಕೆ ಅನ್ವಯಿಸುವುದಿಲ್ಲ.

**ಸಾಲದ ಮೊತ್ತ :**

- ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಘಟಕಗಳಿಗೆ : ರೂ.500.00 ಲಕ್ಷ ಅವಧಿ ಸಾಲ (ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ)
- ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಸಾಲದ ಮೊತ್ತವು ರೂ.500.00 ಲಕ್ಷ ಮೀರಿದಲ್ಲಿ, ಬಡ್ಡಿ ಸಹಾಯಧನಕ್ಕೆ ಸಾಲದ ಮೊತ್ತವನ್ನು ರೂ.500 ಲಕ್ಷಗಳವರೆಗೆ ಪರಿಗಣಿಸಿ, ಹೆಚ್ಚುವರಿ ಸಾಲದ ಮೊತ್ತಕ್ಕೆ ಕೆ.ಎಸ್.ಎಫ್.ಸಿಯ ಒಪ್ಪಂದಿತ ಬಡ್ಡಿದರ (contract rate of interest) ವಿಧಿಸಲಾಗುವುದು.
- ಘಟಕವು ಕೆ.ಎಸ್.ಎಫ್.ಸಿ ಯಿಂದ 'ಕಾಂಪೋಸಿಟ್ ಸಾಲ' ಪಡೆದಿದ್ದಲ್ಲಿ, ಅದರಲ್ಲಿ 'ಅವಧಿ ಸಾಲ'ದ ಮೊತ್ತ ಅನ್ವಯವಾಗುವ ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ ಅನ್ವಯಿಸುತ್ತದೆ.
- ಸಹಾಯಧನದ ಬಿಡುಗಡೆ: ಬಡ್ಡಿ ಸಹಾಯಧನವನ್ನು ಮುಂಗಡವಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡುವುದು. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಅರ್ಹ ಘಟಕಗಳಿಗೆ ಆಯಾ ತಿಂಗಳು ಸರ್ಕಾರ ಬಿಡುಗಡೆ ಮಾಡಿದ ಅನುದಾನದಿಂದ ಭರಿಸುವುದು.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ 4% ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ರೂ. 10.00 ಕೋಟಿವರೆಗೆ ಸಾಲವನ್ನು ವಿತರಿಸಲಾಗುತ್ತಿದೆ**

**4. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ),**

2008-09ನೇ ಸಾಲಿನಿಂದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮವನ್ನು (PMEGP) ಜಾರಿಗೊಳಿಸಲಾಗುತ್ತಿದೆ. ಸ್ಥಳೀಯ ಸಂಪನ್ಮೂಲಗಳ ಆಧಾರದ ಮೇಲೆ ಉತ್ಪಾದನೆ ಮತ್ತು ಸೇವಾ ವಲಯಗಳ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.

ಈ ಯೋಜನೆಯಡಿ ವಿವಿಧ ಬ್ಯಾಂಕ್‌ಗಳ ಮೂಲಕ ಉತ್ಪಾದನಾ ವಲಯಕ್ಕೆ ರೂ. 50.00 ಲಕ್ಷ ಮತ್ತು ಸೇವಾ ವಲಯಕ್ಕೆ ರೂ. 20.00 ಲಕ್ಷದವರೆಗೆ ಸಾಲವನ್ನು ವಿಸ್ತರಿಸಲಾಗಿದೆ. ಯೋಜನೆಯಡಿಯಲ್ಲಿ ಲಭ್ಯವಿರುವ ಮಾರ್ಜಿನ್ ಹಣದ ವಿವರಗಳು ಕೆಳಕಂಡಂತಿವೆ:

| ವರ್ಗ | ಅಂಚುಹಣ | |
|---|---|---|
| | ನಗರ | ಗ್ರಾಮೀಣಾ |
| ಸಾಮಾನ್ಯವರ್ಗದವರಿಗೆ | 15% | 25% |
| ಪ.ಜಾ, ಪ.ಪಂ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ಮಾಜಿಸೈನಿಕ, ಅಂಗವಿಕಲ, ಮಹಿಳೆ | 25% | 35% |

## ಅನುಬಂಧ - 2

| Sl NO | Year | Name & Address of the unit | Amount of Subsidy Released in Rs. |
|---|---|---|---|
| 1 | 2023-24 | M/s.Shiva Sai Pulses, Plot No.20 & 21, Humanabad Road, Belur Cross, Kalaburagi. | 25,00,000.00 |
| 2 | 2024-25 | M/S GAJRAJ AGRO INDUSTRIES, PLOT NO.83, KAPNOOR 2ND PHASE,KIADB INDUSTRIAL AREA,KALABURAGI. | 25,13,688.00 |
| 3 | 2024-25 | M/S GAJRAJ DALL INDUSTRIES, SY.NO.8/1304/6E/5, FILTER BED ROAD , VAKKALGERA, KALABURAGI. | 23,89,256.00 |
| 4 | 2024-25 | M/S MUNISHWAR INDUSTRIES, PLOT NO.56A, SY.NO.61/12, BELUR (J) VILLAGE, HUMNABAD ROAD, KALABURAGI. | 1,05,00,000.00 |
| | | | **1,79,02,944.00** |